ಸಂಖ್ಯೆ:ಲೋಇ 16 ಬಿಎಲ್‌ಕ್ಯೂ 2009

ಕರ್ನಾಟಕ ವಿಧಾನ ಸಭೆ
13ನೇ ವಿಧಾನ ಸಭೆ
3ನೇ ಅಧಿವೇಶನ

473 ಶ್ರೀ ಸುರೇಶ್ ಬಾಬು.ಸಿ.ಬಿ(ಚಿಕ್ಕನಾಯಕನಹಳ್ಳಿ)
ಲೋಕೋಪಯೋಗಿ ಸಚಿವರು

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿರುವ ಪ್ರವಾಸಿ ಮಂದಿರದಲ್ಲಿ ಮೇಲಂತಸ್ತು ಕಟ್ಟಡದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ ಈ ಸಾಲಿನಲ್ಲಿ ಪ್ರವಾಸಿ ಮಂದಿರದ ಮೇಲಂತಸ್ತು ಕಟ್ಟಡ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ನೀಡಿ, ಚಾಲನೆ ನೀಡಲಾಗುವುದೇ?

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಲ್ಲಿರುವ ಪ್ರವಾಸಿ ಮಂದಿರದಲ್ಲಿ ಹಾಲಿಯಿರುವ 4 ಕೊಠಡಿಗಳ ಜೊತೆಗೆ ಮೊದಲನೇ ಮಹಡಿಯಲ್ಲಿ 3 ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಅನುದಾನ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುವುದು.

ಸಂಖ್ಯೆ:ಲೋಇ 15 ಬಿಎಲ್‌ಕ್ಯೂ 2009

-: ಕರ್ನಾಟಕ ವಿಧಾನ ಸಭೆ :-

474 ಶ್ರೀ ಸುರೇಶ್ ಬಾಬು ಸಿ.ಬಿ.
ಮಾನ್ಯ ಮುಖ್ಯಮಂತ್ರಿಯವರು

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಗಣಿಗಾರಿಕೆ ಪ್ರದೇಶಗಳೆಷ್ಟು; ಅವು ಯಾವುವು;

ಚಿಕ್ಕನಾಯಕನಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಜಾಣೇಹಾರ್, ಬುಳ್ಳೇನಹಳ್ಳಿ, ಬೆಳವಾಡಿ, ಬೈರಲಿಂಗನಹಳ್ಳಿ, ಮತಿಘಟ್ಟ, ಗುರವಾಪುರ, ಅಗ್ರಹಾರ, ಸೋಮನಹಳ್ಳಿ, ಯರೇಕಟ್ಟೆ, ಸೊಂಡೇನಹಳ್ಳಿ, ಮಂಚೇಕಟ್ಟೆ, ಕೆಂಕೆರೆ, ರಾಮನಹಳ್ಳಿ, ಸಾದರಹಳ್ಳಿ, ದೊಡ್ಡರಾಂಪುರ, ಹತ್ಯಾಳು, ತೊನ್ನಲಾಪುರ, ಕಾರ್ತಿಕೇಹಾಳ್, ಹೊಂಬಾಲಘಟ್ಟ, ಆಶ್ರೀಹಾಳ್, ಹೊನ್ನೇಬಾಗಿ ಮತ್ತು ಗೊಲ್ಲರಹಳ್ಳಿ, ಈ ರೀತಿ ಒಟ್ಟು 22 ಪ್ರದೇಶಗಳನ್ನು ಗಣಿಗಾರಿಕೆ ಪ್ರದೇಶಗಳೆಂದು ಗುರುತಿಸಲಾಗಿದೆ.

ಆ) ಯಾವ ಯಾವ ಕಂಪನಿಗಳಿಗೆ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ;

ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಗಣಿಗಾರಿಕೆ ನಡೆಸಲು ಎಷ್ಟು ಪ್ರಮಾಣದಲ್ಲಿ ಪರವಾನಗಿ ನೀಡಲಾಗಿದೆ ಹಾಗೂಎಷ್ಟು ವರ್ಷಗಳಿಗೆ ಅನುಮತಿ ನೀಡಲಗಿದೆ;

ಭಾರತ ಸರ್ಕಾರದ ಇಂಡಿಯನ್ ಬ್ಯೂರೋ ಆಫ್ ಮೈನ್ಸ್, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಮಂತ್ರಾಲಯ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರುಗಳು ನಿಗದಿಪಡಿಸುವ ಪ್ರಮಾಣಕ್ಕೆ ಅನುಗುಣವಾಗಿ ಗಣಿಗಾರಿಕೆ ನಡೆಸಲು